ಇದು Minor Irrigation ಗೆ ಹೋಗಬೇಕು. ನೀವು ಕೆಲಸವನ್ನು entrust ಮಾಡುವುದಾದರೆ Minor Irrigation ಮಾಡಿ, ಅದು ಬೇರೆ ಕೆಲಸ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಅಷ್ಟೆ ಹೇಳುತ್ತಿರುವುದು, ನಾನು ಏನು confusion ನಲ್ಲಿ ಇಲ್ಲ, ನನಗೆ ಗೊತ್ತಿದೆ.

ಅಧ್ಯಕ್ಷರು: ಆಯಿತು, ಅದರ ಬಗ್ಗೆ discussion ಆಗಿದೆ. ನಿಮ್ಮ ಸಲಹೆಯನ್ನು ಮಾನ್ಯ ಮಂತ್ರಿಯವರು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು: ಬೇಡ ಪಾಟೀಲ್‌ರವರೇ ಸಾಕು, ಈಗಾಗಲೇ clear cut ಹೇಳಿದ್ದಾರೆ.

ಶ್ರೀ ಎ.ಎಸ್.ಪಾಟೀಲ್: ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. I know the timings. ಸನ್ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದು ಇಷ್ಟೇ. 2007ರ ಜೂನ್ ತಿಂಗಳಲ್ಲಿ ಬಹಳ ದೊಡ್ಡ ಹಾನಿಯಾಗಿದೆ. ಆ ಸಮಯದಲ್ಲಿ ಹಿಂದೆ ಇದ್ದಂಥ ಸಚಿವರೂ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಸುಮಾರು 11 ಹಳ್ಳಿಗಳು ಸಂಪೂರ್ಣ ಮುಳುಗಿ ಹೋಗಿದ್ದವು, 6,500 ಮನೆಗಳು ಸಂಪೂರ್ಣ ನಾಶವಾಗಿವೆ, ಇವತ್ತಿಗತೂ ಪ್ರತಿಹಳ್ಳೀಯಲ್ಲಿ 8–10 ಕುಟುಂಬಗಳು ಶೆಡ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ. ದಯಮಾಡಿ, ಸಚಿವರು ಈ ಸಾರಿ ಬಿಜಾಪುರ ಜಿಲ್ಲೆಗೆ ಬಂದಾಗ ಅಲ್ಲಿಗೆ visit ಮಾಡಬೇಕು. ಸನ್ಮಾನ್ಯ ನಾಡಗೌಡ ಸಾಹೇಬರು ಏನು ಹೇಳಿದ್ದಾರೆ, ತಾವು ಆ ರೀತಿ ಕೆನಾಲ್ ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಬಹಳ ದೊಡ್ಡ ಅನಾಹುತ ಮತ್ತೆ ಆಗುತ್ತದೆ ಎನ್ನುವ ಮನವಿಯನ್ನು ನಿಮ್ಮ ಮುಂದೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಆಯಿತು.

ಗುಲ್ಬರ್ಗದಲ್ಲಿ ಹೊಸ ಸಿಮೆಂಟ್ ಕಾರ್ಖಾನೆ ಸ್ಥಾಪಿಸು ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**73 (264)**
ಸದಸ್ಯರ ಹೆಸರು	:	ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಉತ್ತರಿಸುವ ಸಚಿವರು	:	ಮಾನ್ಯ ಶ್ರೀ ಮಾರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
ಉತ್ತರಿಸುವ ದಿನಾಂಕ	:	**28.7.2008**

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹೊಸ ಸಿಮೆಂಟ್ ಕಾರ್ಖಾನೆ ಸ್ಥಾಪಿಸಲು ಹಲವಾರು ಪ್ರಸ್ತಾವನೆಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅನುಮೋದಿಸಿದ ಪ್ರಸ್ತಾವೆಗಳ ಸಂಖ್ಯೆ ಎಷ್ಟು?

ಎಂಟು

ಇ) ಬಾಕಿ ಇರುವ ಪ್ರಸ್ತಾವನೆಗಳನ್ನು ಅನುಮೋದಿಸಲು ಬೇಕಾಗುವ ಸಮಯ ಎಷ್ಟು?

ಹಾಲಿ ಬಾಕಿ ಇರುವ ಒಂದು ಪ್ರಸ್ತಾವನೆಯನ್ನು ಮುಂದಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಅನುಮೋದನೆಗೆ ಮಂಡಿಲಾಗುವುದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಉತ್ತರವನ್ನು ಒದಗಿಸಿದ್ದಾರೆ. ನಾನು ಉತ್ತರವನ್ನು ಕೇಳಿರುವ ಉದ್ದೇಶ ಇಷ್ಟೇ. ಗುಲ್ಬರ್ಗ ಜಿಲ್ಲೆಯಲ್ಲಿ limestone deposit ಇದೆ. ಈಗ ಬಹಳಷ್ಟು ಕಂಪನಿಗಳು, ಸಿಮೆಂಟ್ ಫ್ಯಾಕ್ಟರಿಗಳು application ಹಾಕುತ್ತಿವೆ. ಆದರೆ cement zone ಮಾಡತಕ್ಕಂಥಾದ್ದು ಸಚಿವರ ಪ್ರಸ್ತಾವನೆಯಲ್ಲಿ ಇಲ್ಲ. ಅದನ್ನು ಕೂಡ ಮಾಡಬೇಕು. ಎರಡನೆಯದು ಏನೆಂದರೆ, ಸಿಮೆಂಟ್ ಕಂಪನಿಗಳಿಗೆ ಬಹಳಷ್ಟು ಭೂಮಿಯನ್ನು ರೈತರಿಂದ ತೆಗೆದುಕೊಳ್ಳುತ್ತಿದ್ದಾರೆ. ಕಂಪನಿಯವರು ಯಾರದ್ದೋ ಮುಖಾಂತರ ಭೂಮಿಯನ್ನು purchase ಮಾಡುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅವರು K.I.A.D.B.ಯಿಂದ ಭೂಮಿ ತೆಗೆದುಕೊಳ್ಳಬಹುದು. ಇಲ್ಲವೆಂದರೆ, Land Reform Act, 109ರ ಪ್ರಕಾರ Government of Karnataka, Revenue Department permission ತೆಗೆದುಕೊಂಡು ಮಾತ್ರ ಅವರು directಆಗಿ ಭೂಮಿಯನ್ನು Purchase ಮಾಡಬಹುದು. ಆದರೆ, ಇಲ್ಲಿ ಅವರು ಏನು ಮಾಡುತ್ತಿದ್ದಾರೆಂದರೆ, ಅವರು mining lease ಹಾಕಿಬಿಟ್ಟು, ಬೇರೆಯವರ ಮುಖಾಂತರ ಅಂದರೆ agency ಮುಖಾಂತರ purchase ಮಾಡುವುದರಿಂದ ರೈತರಿಗೆ ಏನು ಹಾನಿಯಾಗುತ್ತಿದೆ ಎಂದರೆ.....

ಅಧ್ಯಕ್ಷರು: ಶರಣ ಪ್ರಕಾಶ್‌ರವರೇ, ನಿಮ್ಮ ಪ್ರಶ್ನೆ ಏನಿದೆ? ನೀವು ಕೇಳುತ್ತಿರುವುದೇನು? ಇದು ಸರಿಯಲ್ಲ. ನಿಮ್ಮ ಪ್ರಶ್ನೆಯಲ್ಲಿ ಅದು ಇಲ್ಲ. ನಿಮಗೆ ಅದಕ್ಕೆ ಉತ್ತರ ಬೇಕಾದರೆ ನೀವು ಅವರ ಛೇಂಬರ್‌ಗೆ ಹೋಗಿ ಕೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಇದು ಸದನದ ಗಮನಕ್ಕೆ ಬರಲಿ ಎಂದು ನಾನು ಹೇಳುತ್ತಿದ್ದೇನೆ. Directly purchase ಮಾಡುವುದಕ್ಕೆ ಕಾನೂನಿನಲ್ಲಿ provision ಇಲ್ಲ. ಯಾರದ್ದೋ ಮುಖಾಂತರ direct purchase ಮಾಡಿದರೆ, ಕೈಗಾರಿಕಾ ನೀತಿ ಪ್ರಕಾರ ರೈತರಿಗೆ ಸಿಗಬೇಕಾಗಿರತಕ್ಕಂಥ ಸವಲತ್ತುಗಳು ಸಿಗುವುದಿಲ್ಲ.

ಆದ್ದರಿಂದ ಇದಕ್ಕೆ ಕಡಿವಾಣ ಹಾಕಬೇಕು. Direct ಆಗಿ purchase ಮಾಡುವ ಹಾಗಿದ್ದರೆ ನೀವು ಅವರಿಗೆ Land Reform Act, Sec. 109 ನಲ್ಲಿ Permission ಕೊಡಿ. ಅವರು ರೈತರ ಜೊತೆ ಒಪ್ಪಂದ ಮಾಡಿಕೊಂಡು ಭೂಮಿ Purchase ಮಾಡಿದರೆ ಅವರಿಗೆ ಸಿಗಬೇಕಾದಂಥ ಎಲ್ಲ ಸವಲತ್ತುಗಳು ಸಿಗುತ್ತವೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಮುರುಗೇಶ್ ಆರ್ ನಿರಾಣಿ: ಸಿಮೆಂಟಿಗೂ ಸಹ ಒಂದು zone ಮಾಡಬೇಕೆಂದು ಡಾ: ಶರಣ ಪ್ರಕಾಶ್‌ರವರು ಹೇಳಿದರು. ನಾವು ಆರು zone ಮಾಡುತ್ತಿರುವುದರಲ್ಲಿ steel, cement zone ಕೂಡಾ ಇದೆ. ಹೆಚ್ಚು limestone areaಗಳು ಗುಲ್ಬರ್ಗ, ಬಾಗಲಕೋಟೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿರುವುದರಿಂದ ಅವುಗಳು cement zone ನಲ್ಲಿ ಸೇರಿವೆ ಎನ್ನುವ ಮಾತುಗಳನ್ನು ಹೇಳುತ್ತೇನೆ. Land acquisition ಬಗ್ಗೆ ಹೇಳುವುದಾದರೆ, land ಕೊಡುವಂಥವರು ಮತ್ತು ಖರೀದಿ ಮಾಡುವಂಥವರ ನಡುವೆ ಒಪ್ಪಂದವಾಗಿ ಖರೀದಿ ಮಾಡಿದರೆ, ಅದು mediator ಮುಖಾಂತರವಾಗಲೀ, ನೇರವಾಗಿ ಆಗಲೀ, ಅದನ್ನು ಮಾಡಬಹುದು ಅದನ್ನು ನಾವ್ಯಾರು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ಹೆಚ್ಚಿನ rate ಸಿಗಬೇಕು ಎನ್ನುವುದು ಅವರ ಉದ್ದೇಶವಾಗಿದೆ. ಅವರು Sec. 109 ಪ್ರಕಾರವಾದರೂ ಮಾಡಬಹುದು ಅಥವಾ through K.I.A.D.B. ಯಿಂದಾದರೂ acquisition ಮಾಡಬಹುದು. Through K.I.A.D.B. acquisition ಮಾಡಿಕೊಳ್ಳಬೇಕಾದರೆ, minimum 60-70% ಭೂಮಿಯನ್ನು ಕೊಡಲಿಕ್ಕೆ ರೈತರು ಒಪ್ಪಿದರೆ, ಉಳಿದಿರುವಂಥ 20–30% ನಷ್ಟವನ್ನು ನಾವು acquisition ಮಾಡಿ ಕಾರ್ಖಾನೆಯವರಿಗೆ ನಾವು ಕೊಡುತ್ತಿದ್ದೇವೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಯಾರದ್ದೋ ಮುಖಾಂತರ purchase ಮಾಡುವುದಕ್ಕೆ ಬಿಡಬೇಡಿ. ಅಂಥವುಗಳು ನಿಮ್ಮ ಗಮನಕ್ಕೆ ಬಂದರೆ ನೀವು ಅದನ್ನು allow ಮಾಡುವುದಕ್ಕೆ ಹೋಗಬೇಡಿ. ರೈತರನ್ನು protect ಮಾಡಿ ಎಂದು ಹೇಳುತ್ತಿದ್ದೇನೆ. ಬೇರೆ ಯಾವ ಉದ್ದೇಶದಿಂದಲೂ ನಾನು ಕೇಳುತ್ತಿಲ್ಲ. ಅಂಥಾದ್ದು ಆದರೆ ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಆಗ ನೀವು ರೈತರನ್ನು protect ಮಾಡಬೇಕು. Revenue Minister ಸಹ ಇದರಲ್ಲಿ ಭಾಗಿಯಾಗಬೇಕಾಗುತ್ತದೆ. ಅಂಥ ಸಂದರ್ಭ ಬಂದಾಗ ನೀವು ರೈತರನ್ನು protect ಮಾಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಮುರುಗೇಶ್ ಆರ್ ನಿರಾಣಿ: ಆಯಿತು.

ಅಧ್ಯಕ್ಷರು: ರಾಜಶೇಖರ ಬಸವರಾಜ್ ಪಾಟೀಲ್‌ರವರೇ ತಮ್ಮ ಪ್ರಶ್ನೆ ಕಂದಾಯ ಇಲಾಖೆಯಿಂದ ಆಹಾರ ಇಲಾಖೆಗೆ ವರ್ಗಾವಣೆ ಯಾಗಿದೆ. ಆದ್ದರಿಂದ, ಅದಕ್ಕೆ ಉತ್ತರ ಬಂದಿಲ್ಲ. ಮುಂದೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್: ಈ ಅದಿವೇಶನದಲ್ಲಿ ನನ್ನ ಮೂರು ಪ್ರಶ್ನೆಗಳು ಬಂದಿವೆ. ದಿನಾಂಕ 28, 29 ಮತ್ತು 30 ಈ ಮೂರು ದಿನವೂ ಪ್ರಶ್ನೆಗಳಿದ್ದವು. ಈ ಮೂರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಯ ಬಗ್ಗೆ ಮಾತನಾಡಲೂ ಅವಕಾಶ ಸಿಗಲಿಲ್ಲ. ಹುಮ್ನಾಬಾದ್ ಬಸ್ ನಿಲ್ದಾಣದ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು: ಆಯಿತು, ಬೇರೆಯದಕ್ಕೆ ಅವಕಾಶ ಕೊಡೋಣ. ಇನ್ನು ಮುಂದೆ ಅದನ್ನು ಸರಿಮಾಡೋಣ.

ರಾಜ್ಯಕ್ಕೆ 734 ಟಿ.ಎಂ.ಸಿ. ನೀರಿನ ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**75 (377)**
ಸದಸ್ಯರ ಹೆಸರು	:	**ಶ್ರೀ ಟಿ.ಬಿ.ಜಯಚಂದ್ರ (ಶಿರಾ)**
ಉತ್ತರಿಸುವ ಸಚಿವರು	:	**ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ. ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ 734 ಟಿ.ಎಂಸಿ ನೀರು ಹಂಚಿಕೆಯಾಗಿರುವ ಪ್ರಕಾರ ಯಾವ ಯಾವ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಗತಿಯಲ್ಲಿರುವ ಯೋಜನಾ ಕಾಮಗಾರಿಗಳು ಯಾವುವು: ಹೊಸ ಯೋಜನೆಗಳು ಯಾವುವು ಹಾಗೂ 734 ಟಿಎಂಸಿ ನೀರಿನಲ್ಲಿ ಬಳಕೆ ಆಗುತ್ತಿರುವ ನೀರಿನ ಪ್ರಮಾಣ ಎಷ್ಟು:

ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ ಹಂಚಿಕೆ ಯಾಗಿರುವ 734 ಟಿಎಂಸಿ ಅನುಸಾರ

ಪೂರ್ಣಗೊಳಿಸಲಾಗಿರುವ ಯೋಜನೆಗಳ ಸಂಖ್ಯೆ : 29.

ಮುಕ್ತಾಯ ಹಂತದಲ್ಲಿರುವ ಯೋಜನೆಗಳ ಸಂಖ್ಯೆ: 19.

ಪ್ರಗತಿಯಲ್ಲಿರುವ ಯೋಜನೆಗಳ ಸಂಖ್ಯೆ:13.

ಹೊಸ ಯೋಜನೆಗಳು – ಯಾವುದೂ ಇರುವುದಿಲ್ಲ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಕೈಗಾರಿಕೆ, ಕುಡಿಯುವ ನೀರು ಮತ್ತು ಚೆನ್ನೈನೀರು ಸರಬರಾಜು ಸೇರಿದಂತೆ ಈವರೆಗೆ 598.24 ಟಿಎಂಸಿ ನೀರಿನ ಬಳಕೆ ಮಾಡಲಾಗಿದೆ.